ದಿನಾಂಕಃ 16-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ಮಾಲದಿನ್ನಿ ಗ್ರಾಮದ ಸರ್ವೆ ನಂ.942/5ರ 9 ಗುಂಟೆಯನ್ನು ರೂ.1,35,000/- ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 22.05.2014 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-1
2. ಮಾಲದಿನ್ನಿ ಗ್ರಾಮದ ಸರ್ವೆ ನಂ.900/1ರ 2 ಗುಂಟೆಯನ್ನು ರೂ.3,00,000/- ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 06.06.2015 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-2
3. ಗೋಕಾಕ ಗ್ರಾಮದ ಸರ್ವೆ ನಂ.375/4 ರ 1ಎಕರೆ 20 ಗುಂಟೆಯನ್ನು ರೂ.13,53,000/- ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 31.03.2015 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-3
4. ಗೋಕಾಕ ಗ್ರಾಮದ ಸರ್ವೆ ನಂ.247/3 ರ 5 ಗುಂಟೆಯನ್ನು ರೂ.13,62,000/-ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 08.05.2015 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-4
5. ಗೋಕಾಕ ಗ್ರಾಮದ ಸರ್ವೆ ನಂ.293/4 ರ 1ಎಕರೆ 8 ಗುಂಟೆ 12ಅಣೆಯನ್ನು ರೂ.32,39,000/-ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 22.04.2015

ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-5

6. ಗೋಕಾಕ ಗ್ರಾಮದ ಸರ್ವೆ ನಂ.533/2 ರ 1ಎಕರೆಯನ್ನು ರೂ.6,50,000/- ಗಳಿಗೆ ಮಾರಾಟ ಮಾಡಿದ ಬಗ್ಗೆ ದಿನಾಂಕ 27.04.2015 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-6

7. ಗೋಕಾಕ ತಾಲೂಕಿನ ನಕಾಶೆಯ ದೃಢಿಕೃತ ನಕಲು  ನಿಪಿ-7

**ವಾಟೀ ಸವಾಲುಃ 1ನೇ ಎದುರುದಾರರ ಪರ ಮಾನ್ಯ ಶ್ರೀ.ಡಿ.ಜಿ.ಪಿ.ರವರಿಂದಃ**

ಈ ರೆಫರೆನ್ಸ ಅರ್ಜಿಯನ್ನು ಸುರೇಶ ಬಸಪ್ಪ ರೇವಕ್ಕನವರ ಸಲ್ಲಿಸಿರುತ್ತಾರೆ. ಅವರು ಏನು ಆಗಬೇಕು ಎಂದರೆ ಸಾಕ್ಷಿಯು ಅವರು ಇದೇ ಭೂಸ್ವಾಧೀನಪಡಿಸಿಕೊಂಡ ಜಮೀನಿಗೂ ಅವರು ಮಾಲೀಕರು ಎನ್ನುತ್ತಾರೆ. ನಾನು ರೆಫರೆನ್ಸ ಅರ್ಜಿ ಸಲ್ಲಿಸಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ಹೆಸರು ಮತ್ತು ಒಟ್ಟು 15 ಜನರ ಹೆಸರಿನಲ್ಲಿ ಅವಾರ್ಡ ಆಗಿದೆ ಎನ್ನುತ್ತಾರೆ. ನಾನು ರೆಫರೆನ್ಸ ಅರ್ಜಿ ಸಲ್ಲಿಸದೇ ಇದ್ದುದ್ದರಿಂದ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇಲ್ಲಎಂದರೆ ಸರಿಯಲ್ಲ.

ನನ್ನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ.ಕಣಗಾಂವ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದೆ ಎಂದರೆ ನಿಜ. ನೇಸರಗಿಯಿಂದ ಕಣಗಾಂವ ಮೂಲಕ ಗೋಕಾಕಗೆ ಹೋಗಬೇಕಾದರೆ 38 ಕಿ.ಮೀ ದೂರವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಣಗಾಂವನಿಂದ ನೇಸರಗಿಗೆ 13 ಕಿ.ಮೀ  ದೂರ ಇದೆ ಎಂದರೆ ನನಗೆ ಗೊತ್ತಿಲ್ಲ. ಕಣಗಾಂವ ಕೊಳವಿಗೆ 8 ಕಿ.ಮೀ. ದೂರ ಇದೆ ಎಂದರೆ ಸಾಕ್ಷಿ ದೂರ ಗೊತ್ತಿಲ್ಲ ಎನ್ನುತ್ತಾರೆ. ಕಣಗಾಂವನಿಂದ ಮಾಲದಿನ್ನಿಗೆ ಹೋಗಬೇಕಾದರೆ ಕೊಳವಿ ಮೂಲಕ ಹೋಗಬೇಕು ಎಂದರೆ ನನಗೆ ಗೊತ್ತಿಲ್ಲ. ಕಣಗಾಂವನಿಂದ ಗೋಕಾಕಗೆ ಹೋಗಬೇಕಾದರೆ ಕೊಳವಿ ಊರು ಸೀಗುತ್ತದೆ ಎಂದರೆ ನಿಜ. ನಿಮ್ಮ ಊರು ಕಣಗಾಂವಯಿಂದ ಗೋಕಾಕಿಗೆ 25 ಕಿ.ಮೀ ದೂರವಾಗುತ್ತದೆ  ಎಂದರೆ

ಸಾಕ್ಷಿ ಎಷ್ಟು ದೂರ ಆಗುತ್ತದೆ ಎಂದು ಗೊತ್ತಿಲ್ಲ  ಎನ್ನುತ್ತಾರೆ. ಗೋಕಾಕ ತಾಲೂಕು ಕೇಂದ್ರ ಎಂದರೆ ನಿಜ. ಗೋಕಾಕ ತಾಲೂಕು ಕೇಂದ್ರ ಇರುವುದರಿಂದ ಅಲ್ಲಿ ಆಸ್ತಿಗಳ ಕಿಮ್ಮತ್ತು ಜಾಸ್ತಿ ಇದೆ ಎಂದರೆ ನಿಜ. ಗೋಕಾಕನಲ್ಲಿ  ಒಂದು ಗುಂಟೆಯಿಂದ 5 ಗುಂಟೆಯವರೆಗ ಜಮೀನನ್ನು ವಸತಿಗಾಗಿ, ಮನೆ ಕಟ್ಟಲು ಮತ್ತು ವಾಣಿಜ್ಯ ಉಪಯೋಗಕ್ಕಾಗಿ ಖರೀದಿ ಮಾಡುತ್ತಾರೆ ಎಂದರೆ ನಿಜ. ನಿಪಿ-4 5 ಗುಂಟೆಯ ಖರೀದಿ ಪತ್ರದಲ್ಲಿ ನಮೂದಿಸಿದ ಸರ್ವೆ ನಂಬರ್ ನನಗೆ ಹೇಳಲಾಗುವುದಿಲ್ಲ. ನಿಪಿ-5 ಮತ್ತು ನಿಪಿ-6 ರಲ್ಲಿ ನಮೂದಿಸಿದ ಸರ್ವೆ ನಂಬರ ನಿಮಗೆ ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ನನಗೆ ಹೇಳಲಗುವುದಿಲ್ಲ ಎನ್ನುತ್ತಾರೆ. ನಿಪಿ-3 ರಿಂದ ನಿಪಿ-6 ರಲ್ಲಿ ನಮೂದಿಸಿದ ಜಮೀನುಗಳನ್ನು ನಾನು ನೋಡಿರುತ್ತೇನೆ. ಆ ಜಮೀನುಗಳಿಗೆ ಯಾವ ದಿನಾಂಕದಂದು ನಾನು ಭೇಟಿ ಕೊಟ್ಟಿದ್ದೇನೆ ಎಂದು ದಿನಾಂಕಗಳು ನೆನಪಿಲ್ಲ. ನಿಪಿ-4 ರಲ್ಲಿ ಕಾಣಿಸಿದ 5 ಗುಂಟೆ ಜಮೀನು ಗೋಕಾಕ ಪಟ್ಟಣದಯಾವ ದಿಕ್ಕಿಗೆ ಇರುತ್ತದೆ ಎಂದು ದಿಕ್ಕನ್ನು ಹೇಳಲಾಗುವುದಿಲ್ಲ. ನಿಪಿ-3, ನಿಪಿ-5 ಮತ್ತು ನಿಪಿ-6 ರಲ್ಲಿ ನಮೂದಿಸಿದ ಜಮೀನುಗಳು ಗೋಕಾಕಿನ ಪಟ್ಟಣದ ಯಾವ ದಿಕ್ಕಿನ ಕಡೆ ಇದೆ ಎಂದು ದಿಕ್ಕನ್ನು ಹೇಳಲಾಗುವುದಿಲ್ಲ.ನಾನು ಗೋಕಾಕಗೆ ಹೋಗಿ ನಿಪಿ-3 ರಿಂದ ನಿಪಿ-6 ರಲ್ಲಿ ಕಾಣಿಸಿದ ಜಮೀನುಗಳನ್ನು ನೋಡದೇ ಇದುದ್ದರಿಂದ ಅವುಗಳು ಗೋಕಾಕ ಪಟ್ಟಣದ  ಯಾುವ ದಿಕ್ಕಿನ ಕಡೆಗೆ ಇದೆ ಎಂದು ನನಗೆ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ.ನಿಪಿ-1 ರಲ್ಲಿ  ನಮೂದಿಸಿದ ಜಮೀನು 9 ಗುಂಟ ಮತ್ತು ನಿಪಿ-2 ರಲ್ಲಿ ನಮೂದಿಸಿದ ಜಮೀನು 2 ಗುಂಟೆ ಇವುಗಳು ತುಂಡು ಜಮೀನು ಎಂದರೆ ನಿಜ. 2 ಗುಂಟೆ ಯಿಂದ 9 ಗುಂಟೆಯ ಜಮೀನುಗಳನ್ನು ಮನೆ ಕಟ್ಟಲು, ವ್ಯಾಪಾರ ಮಾಡಲು, ಉದ್ಯೋಗ ಮಾಡಲು ಖರೀದಿ ಮಾಡುತ್ತಾರೆ ಎಂದರೆ ನಿಜ. ನಿಪಿ-1 ಮತ್ತು ನಿಪಿ-2 ರಲ್ಲಿ ಕಾಣಿಸಿದ ಜಮೀನಿಗೆ ನಾನು ಹೋಗಿ ನೋಡಿರುತ್ತೇನೆ. ನಿಪಿ-1 ಮತ್ತು ನಿಪಿ-2  ರಲ್ಲಿ ಕಾಣಿಸಿದ ಜಮೀನುಗಳು ಮಾಲ್ದಿಣಿ ಊರಿಗೆ ತಾಗಿಕೊಂಡಿದೆ ಎಂದರೆ ಸಾಕ್ಷಿ ಅದು ಗೋಕಾಕನ ಹತ್ತಿರದಲ್ಲಿ ಇದೆ ಎನ್ನುತ್ತಾರೆ. ನಿಪಿ-1 ಮತ್ತು ನಿಪಿ-2 ರಲ್ಲಿ ನಮೂದಿಸಿದ ಜಮೀನುಗಳು

ಗೋಕಾಕಗೆ ಸಮೀಪ ಇರುವುದರಿಂದ ಅವುಗಳ ಕಿಮ್ಮತ್ತು ಜಾಸ್ತಿ ಇದೆ ಎಂದರೆ ನಿಜ. ಸಾಮಾನ್ಯವಾಗಿ ಒಂದು ಊರಿನ ಜಮೀನನ್ನು ಇನ್ನೊಂದು ಊರಿನ ಜಮೀನಿಗೆ ಹೋಲಿಸಿದರೆ ವ್ಯತ್ಯಾಸ ಇರುತ್ತದೆ ಎಂದರೆ ನಿಜ. ಬೇರೆ ಬೇರೆ ಊರಿನಲ್ಲಿದ ಜಮೀನನ ಕಿಮ್ಮತ್ತು ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿ ಜಮೀನುಗಳು ಒಂದೇ ರೀತಿಯದು ಇದ್ದರೆ ಒಂದೇ ರೀತಿಯ ಕಿಮ್ಮತ್ತು ಆಗುತ್ತದೆ, ಬೇರೇ ಬೇರೇ ರೀತಿಯದು ಇದ್ದರೇ ಬೇರೆ ಬೇರೆ ಕಿಮ್ಮತ್ತು ಆಗುತ್ತದೆ ಎನ್ನುತ್ತಾರೆ. ನನ್ನ ಭೂ ಸ್ವಾಧೀನ ಪಡಿಸಿಕೂಂಡ ಜಮೀನು ಉತಾರ ಇರುತ್ತದೆ ಎಂದರೆ ನಿಜ. ನಿಪಿ-1 ರಿಂದ ನಿಪಿ-6 ರ ಜಮೀನಿನ ಉತಾರ ಸಿಗುತ್ತದೆ ಎಂದರೆ ನಿಜ. ಜಮೀನುಗಳ ಉತಾರ ಹಾಜರು ಮಾಡಿದರೆ ನಮ್ಮ ಭೂ ಸ್ವಾಧೀನ ಪಡಿಸಿಕೊಂಡ ಜಮೀನು ಮತ್ತು ನಿಪಿ-1ರಿಂದ ನಿಪಿ-6 ರಲಿ ಕಾಣಿಸಿದ ಜಮೀನು ಒಂದೇ ರೀತಿಯದ್ದು ಇದೇಯೋ ಇಲ್ಲವೋ ಎಂದು ಗೊತ್ತಾಗುತ್ತದೆ ಎಂದರೆ ನಿಜ. ನನಗೆ ನಮ್ಮ ಭೂ ಸ್ವಾಧೀನಪಡಿಸಿದ ಜಮೀನಿನ ಉತಾರ ಮತ್ತು ನಿಪಿ-1 ರಿಂದ 6 ಜಮೀನಿನ ಉತಾರ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ನನ್ನ ಜಮೀನು ಮತ್ತು ನಿಪಿ-1 ರಿಂದ 6 ರಲ್ಲಿ ತೋರಿಸಿದ ಜಮೀನು ಒಂದೇ ಪ್ರಕಾರದ್ದು ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಯಾವ ದಾಖಲೆ ಹಾಜರು ಮಾಡಿದ್ದಿರಿ ಎಂದರೆ ಸಾಕ್ಷಿ ನಕಾಶೆಯನ್ನು ಹಾಜರು ಮಾಡಿದ್ದೆನೆ ಎನ್ನುತ್ತಾರೆ. ನಿಪಿ-7 ರ ನಕಾಶೆಯಲ್ಲಿ ನಮ್ಮ ಜಮೀನು ಮತ್ತು ನಿಪಿ-1 ರಿಂದ 6 ರಲ್ಲಿರುವ ಜಮೀನು ಒಂದೇ ರೀತಿಯದ್ದು ಎಂದು ಕಾಣಿಸಿಲ್ಲ ಎಂದರೆ ನಿಜ. ನಿಪಿ-1 ರಿಂದ ನಿಪಿ-6 ರಲ್ಲಿ ನಮೂದಿಸಿದ ಜಮೀನು ಫಲವತ್ತಾದ ಜಮೀನು ಆದ್ದರಿಂದ ಮತ್ತು ಅವುಗಳಿಗೆ ಬಹಳ ಕಿಮ್ಮತ್ತು ಇರುವುದರಿಂದ ಅಷ್ಟು ಕಿಮ್ಮತ್ತು ನಮ್ಮ ಭೂ ಸ್ವಾಧೀನಪಡಿಸಿಕೊಂಡ ಜಮೀನಿಗೆ ಇಲ್ಲದೇ ಇದ್ದುದ್ದರಿಂದ ನಮ್ಮ ಜಮೀನಿಗೆ ಅಷ್ಟು ಮೌಲ್ಯ ಕೊಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪಹಣಿ ಪತ್ರಿಕೆಯಲ್ಲಿ ನೀರಾವರಿಯ ಮೂಲ, ಜಮೀನಿನಲ್ಲಿ ಬೆಳೆದ ಬೆಳೆ, ಮಣ್ಣಿನ ತರಹೆ ಇವುಗಳ ವಿವರ ಇರುತ್ತದೆ ಎಂದರೆ ನಿಜ. ಈ ವಿವರಗಳು ನಿಮ್ಮ

ಪಹಣಿ ಪತ್ರಿಕೆಯಲ್ಲಿಯೂ ಸಹ ಇರುತ್ತದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಭೂ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಕಬ್ಬು ಬೆಳೆಯಲಾಗುತ್ತಿತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ಅವಾರ್ಡಿನಲ್ಲಿ ತೋರಿಸಿದ ಸರ್ವೆ ನಂಬರ 457/1 ರಲ್ಲಿನ ಸಬ್ ನಂಬರಗಳೆಲ್ಲವೂ ಒಟ್ಟು ವಿಸ್ತೀರ್ಣ 13 ಎಕರೆ 00 ಗುಂಟೆ ಇದರಲ್ಲಿ ಭೂ ಸ್ವಾಧೀನಪಡಿಸಿಕೊಂಡ 02 ಎಕರೆ 22 ಗುಂಟೆ ಹೊರತುಪಡಿಸಿ ಉಳಿದ ಭಾಗದಲ್ಲಿ ನಾವು ಸಾಗುಳಿ ಮಾಡುತ್ತೇನೆ ಎಂದರೆ ನಿಜ. ನಮ್ಮ ಭೂ ಸ್ವಾಧೀನಪಡಿಸಿಕೊಂಡ ಜಮೀನು ಅವಾರ್ಡನಲ್ಲಿ ಕಾಣಿಸಿದ 8 ಜನರಿಗೂ ಸೇರಿದ್ದು. ಭೂಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಎಕರೆ 1 ಕ್ಕೆ 70 ಟನ್ ಕಬ್ಬು ಬೆಳಯಲಾಗುತ್ತಿತ್ತು ಎಂದು ತೋರಿಸಲು ಒಂದು ಲಕ್ಷ ನಿವ್ವಳ ಲಾಭ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ಭೂ ಸ್ವಾಧೀನಪಡಿಸಿಕೊಂಡ ಕಾಲಕ್ಕೆ ನನ್ನ ಜಮೀನಿಗೆ 1 ಎಕರೆಗೆ 50 ಲಕ್ಷ ರೂಪಾಯಿ ಕಿಮ್ಮತ್ತು ಆಗುತ್ತಿತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ನಮ್ಮ ಭೂ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಬೋರ್ವೆಲ್ ಮತ್ತು ಭಾವಿ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಮಾಡಿಲ್ಲ ಎಂದರೆ ನಿಜ. ಸಾಕ್ಷಿಯು ದಾಖಲೆಗಳನ್ನು ಭೂ ಸ್ವಾಧೀನಾಧಿಕಾರಿಗಳಿಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ಬಾವಿಯಾಗಲಿ ಬೋರ್ವೆಲ್ ಆಗಲಿ ಇಲ್ಲದೇ ಇದ್ದರು ಇತ್ತು ಎಂದು ಆ ದಾಖಲೆಗಳನ್ನು ಭೂ ಸ್ವಾಧೀನಾಧಿಕಾರಿಗಳಿಗೆ ಕೊಡಲಾಗಿದೆ ಎಂದು ಸುಳ್ಳು ಸಾಕ್ಷೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜಮೀನು ಭೂ ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರದಿಂದ ದಿಃ 10-03-2016 ರಂದು ನೋಟೀಫಿಕೇಶನ ಆಗಿದೆ ಎಂದರೆ ನಿಜ. ನೋಟೀಫಿಕೇಶನ ಆದ ನಂತರ ಭೂ ಸ್ವಾಧೀನಾಧಿಕಾರಿಗಳು ನನಗೆ ನೋಟೀಸ ಕೊಟ್ಟಿದ್ದರು ಎಂದರೆ ನಿಜ. ನಂತರ ಭೂ ಸ್ವಾಧೀನಾಧಿಕಾರಿಗಳು ಮತ್ತು ನಿರಾವರಿ ಇಲಾಖೆಯವರು ಜಂಟಿ ಸರ್ವೆ ಮಾಡಿ ಹೋಗಿದ್ದರು ಎಂದರೆ ನಿಜ. ನಮ್ಮ ಜಮೀನಿನ ನೀರಾವರಿ ಮೂಲ ಬೆಳೆದ ಬೆಳೆ, ಇವುಗಳನ್ನು ಪರಿಶೀಲಣೆ ಮಾಡಿ ಭೂ ಸ್ವಾಧೀನಾಧಿಕಾರಿಗಳು ಅವಾರ್ಡ

ಮಾಡಿದರು ಎಂದರೆ ನಿಜ. ಅವಾರ್ಡನ ಕೊಷ್ಟಕ 2 ರಲ್ಲಿ ತೋರಿಸಿದ ಜಮೀನುಗಳು ನಮ್ಮ ಜಮೀನಿನ ಸುತ್ತ ಮುತ್ತಲಿನ ಜಮೀನು ಎಂದರೆ ನಿಜ. ಆ ಜಮೀನುಗಳು ಮತ್ತು ನನ್ನ ಜಮೀನು ಒಂದೇ ಪ್ರಕಾರದ ಜಮೀನು ಎಂದರೆ ನಿಜ. ಅವಾರ್ಡಿನ ಕೊಸ್ಟಕ 2 ರಲ್ಲಿ ನಮೂದಿಸಿದ ಜಮೀನು ಮತ್ತು ನಿಮ್ಮ ಜಮೀನು ಒಂದೇ ರೀತಿಯ ಬೆಲೆ ಬಾಳುವ ಜಮೀನು ಎಂದರೆ ಸಾಕ್ಷಿ ಹೆಚ್ಚು ಕಡಿಮೆ ಇರುತ್ತವೆ ಎನ್ನುತ್ತಾರೆ. ಅವಾರ್ಡಿನ ಕೊಸ್ಟಕ 2 ರಲ್ಲಿ ನಮೂದಿಸಿದ ಜಮೀನನ ಕಿಮ್ಮತ್ತು ನಮ್ಮ ಭೂ ಸ್ವಾಧೀನಪಡಿಸಿಕೊಂಡ ಜಮೀನಿರಿಂದ ಹೆಚ್ಚು ಇದೆ ಎಂದರೆ ಸರಿಯಲ್ಲ. ಕೊಸ್ಟಕ 2 ರಲ್ಲಿ ನಮೂದು ಮಾಡಿದ ಜಮೀನುಗಳ ಕ್ರಯ ಪತ್ರಗಳು 2014 ರಿಂದ 2016 ರವರೆಗೆ ಆದ ಕ್ರಯ ಪತ್ರಗಳು ಎಂದರೆ ನಿಜ. ಭೂ ಸ್ವಾಧೀನಾಧಿಕಾರಿಗಳು ಅವಾರ್ಡಿನ ಕೊಸ್ಟಕ 2 ರಲ್ಲಿ ತೋರಿಸಿದ ಕ್ರಯ ಪತ್ರದ ಅಂಕಿಅಂಶಗಳ ಬೆಲೆಗಿಂತ ಸರ್ಕಾರದ ಎಸ್. ಆರ್. ರೇಟ ಅಂದರೆ ಮಾರ್ಗ ಸೂಚಿ ಬೆಲೆ ಹೆಚ್ಚು ಇದ್ದುದ್ದರಿಂದ ಸರ್ಕಾರಿ ಮಾರ್ಗ ಸೂಚಿ ಬೆಲೆಯನ್ನು ಸರಿಯಾಗಿ ನಿಗದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ನೀರಾವರಿ ಜಮೀನು ಎಂದು ಪರಿಗಣಿಸಿಅವಾರ್ಡ ಮಾಡಲಾಗಿದೆ ಎಂದರೆ ನಿಜ. ನಾನು ಅವಾರ್ಡ ಹಣವನ್ನು ಪಡೆದಿದೇನೆ ಎಂದರೆ ನಿಜ. ಆ ಅವಾರ್ಡ ಯೋಗ್ಯವಾಗಿದೆ ಎಂದರೆ ಸರಿಯಲ್ಲ. ಭೂ ಸ್ವಾಧೀನಾಧಿಕಾರಿಗಳು ನನ್ನ ಜಮೀನಿಗೆ ಯೋಗ್ಯ ಬೆಲೆ ನಿಗದಿ ಮಾಡಿದ್ದರು ಸಹ ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದ ಸುಳ್ಳು ರೇಪರೆನ್ಸ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

2ನೇ ಎದುರುದಾರ ಪರ ಮಾನ್ಯ ವಕೀಲರು ಸಹ ವೇಳೆ ಕೋರಿದ್ದು ವೇಳೆ ಮಂಜೂರು ಮಾಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.